ರಂಗಾಭಟ್ಟನಿಗೂ ಅನಿಸತೊಡಗಿತು. ಊರವರಿಗೆ ತಾನಿನ್ನು ಪೂಜೆ ಮಾಡುವುದಿಲ್ಲ. ಬೇರೆ ಯಾರನ್ನಾದರೂ ಮಾಡಿಕೊಳ್ಳಿ ಎಂದು ಸ್ಪಷ್ಟವಾಗಿ ತಿಳಿಸಿದ.

ಮಗ ಶಂಕರನಾರಾಯಣನಿಗೆ ಮದುವೆಯೇನೋ ಆಯಿತು.

ಸೊಸೆ ಸುನಂದಳ ಇಷ್ಟದಂತೆ ಅವನು ದಾವಣಗೆರೆಯಲ್ಲಿ ಹೋಟೆಲ್ ಪ್ರಾರಂಭಿಸಿದ. ಉದ್ಯಮ ಚೆನ್ನಾಗಿಯೇ ನಡೆಯಿತು. ಅವನು ಬಲಕಾಯಿಸಿದ. ಪೂರ್ಣ ಸಂಸಾರವೇ ಊರು ಬಿಟ್ಟಿತು.

ಇತ್ತ ದೇವಸ್ಥಾನಕ್ಕೆ ಪೂಜಾ ಭಟ್ಟರಿಲ್ಲದಿರುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಪ್ರತಿದಿನ ದೊಡ್ಡ ಚರ್ಚೆಯಾಯಿತು.

ಒಂದು ದಿನ ಈ ವಿಷಯಕ್ಕಾಗಿಯೇ ಊರವರ ಸಭೆ ಸೇರಿಸಲಾಯಿತು.

ಹಲವರು ಹಲವು ಸಲಹೆಗಳನ್ನು ಕೊಟ್ಟರು.

ದಿನಕ್ಕೊಂದು ಮನೆಯವರು ದೇವಸ್ಥಾನದ ಪೂಜೆ ಜವಾಬ್ದಾರಿ ನಿರ್ವಹಿಸಬೇಕು ಎಂದು ಕಲ್ಲೂರು ವೆಂಕಟಪ್ಪ ಹೇಳಿದ.

ಆದರೆ, ಇದನ್ನು ಎಲ್ಲರೂ ಒಪ್ಪಲಿಲ್ಲ. ಕೆಲವು ಮನೆಯವರಿಗೆ ಯಾವ ಮಂತ್ರವೂ ಬರುವುದಿಲ್ಲ. ಕೆಲವು ಮನೆಯಲ್ಲಿ ಹೆಂಗಸರು ಮಾತ್ರ ಇದ್ದಾರೆ. ಅವರೆಲ್ಲಾ ದೇವಸ್ಥಾನದ ಪೂಜೆ ಮಾಡುವುದು ಹೇಗೆ?

ಬೇರೆ ಯಾರನ್ನಾದರೂ ಒಳ್ಳೇ ಭಟ್ಟರನ್ನೇ ತಂದು ಪೂಜೆಗೆ ನೇಮಿಸಬೇಕು ಎಂದು ಹಲವರು ಸಲಹೆಯನ್ನೇನೋ ಕೊಟ್ಟರು.

ಒಳ್ಳೇ ಭಟ್ಟರು ಈ ದೇವಸ್ಥಾನಕ್ಕೆ ಬಂದು ಪೂಜೆಗೆ ಒಪ್ಪಿಕೊಳ್ಳುತ್ತಾರೆಯೇ?

ಹಾಗೊಮ್ಮೆ ಒಪ್ಪಿದರೂ ಅವರ ಸಂಭಾವನೆ ಕೊಡಲು ಸಾಧ್ಯವೇ?

ಊರಲ್ಲಿ ಅಷ್ಟು ಹಣ ವರಾಡ ಸಂಗ್ರಹ ಸಾಧ್ಯವೇ?

ಕೊನೆಗೆ ಊರಲ್ಲೇ ಯಾರಾದರೂ ಪೂಜೆ ಮಾಡುವವರನ್ನು ಆಯ್ಕೆಮಾಡಿ, ಅವರಿಗೇ ತಿಂಗಳ ಕನಿಷ್ಠ ವೇತನ ನೀಡುವುದೆಂದು ತೀರ್ಮಾನವಾಯಿತು.

ಹಾಗೆ ಪೂಜೆಗೆಂದು ಆಯ್ಕೆಗೊಂಡವನೇ ಭಾಸ್ಕರ ಭಟ್ಟ.

ಭಾಸ್ಕರ ಭಟ್ಟನಿಗೆ ಅಲ್ಪ ಸ್ವಲ್ಪ ಜಮೀನೇನೋ ಇದೆ. ದೇವಸ್ಥಾನದ ಸಮೀಪವೇ ಅವನ ಮನೆಯೂ ಇದೆ. ದೇವಸ್ಥಾನದ ಪೂಜೆಯಿಂದ ತಿಂಗಳ ವೇತನ ಸಿಕ್ಕುತ್ತದೆ ಎನ್ನುವುದು ಸಂತೋಷದ ವಿಷಯವೇನೋ ನಿಜ. ಪೂಜೆ ನಿಯಮಿತವಾಗಿ ಒಂದು ದಿನವೂ ತಪ್ಪದಂತೆ ಮಾಡಬೇಕು.

ಇದು ಕಷ್ಟವೇ. ತಾನು ಪೂಜೆ ಮಾಡುವುದಾದರೂ ಊರವರು ಹೇಳಿದ್ದಕ್ಕೆಲ್ಲಾ ಸುಲಭವಾಗಿ ಒಪ್ಪಿಕೊಳ್ಳಬಾರದು. ಪೂಜೆ ಮಾಡುವವರು ಬೇರೆ ಯಾರೂ ಇಲ್ಲ. ಕಾದು ನೋಡುವ ತಂತ್ರಕ್ಕಿಳಿದ ಭಾಸ್ಕರ ಭಟ್ಟ.

ತನ್ನನ್ನು ಬಿಡುವುದಿಲ್ಲವೆಂಬುದು ಗೊತ್ತಾಗುತ್ತಿದ್ದಂತೆ ಅವನು ಗಟ್ಟಿಯಾದ.

ಬೆಳಗ್ಗೆ ಒಂದು ಹೊತ್ತು ಮಾತ್ರ ಪೂಜೆ ಮಾಡುತ್ತೇನೆಂದು ಷರತ್ತು ಹಾಕಿದ. ಯಾರೂ ಕಂಯ್–ಕುಂಯ್ ಹೇಳಲಿಲ್ಲ.

ಬಿಟ್ಟರೆ ಇವನೂ ಸಿಕ್ಕದೇ ಹೋದರೆ ಏನು ಮಾಡುವುದು?

ಕೆಲವು ದಿವಸ ಭಾಸ್ಕರ ಭಟ್ಟ ನಿತ್ಯ ಪೂಜೆ ಚೆನ್ನಾಗಿಯೇ ಮಾಡಿದ.

ಇತ್ತೀಚೆಗೆ ಅವನಿಗೆ ಪೂಜೆಯಲ್ಲಿ ಕಷ್ಟವಾಗುತ್ತದೆ ಎನಿಸಿದ್ದು ಮೂಲ ವಿಗ್ರಹವಲ್ಲ. ಮನೆ ಮನೆಗಳಿಂದ ಬಂದು ಸ್ಥಾಪನೆಗೊಂಡ 50ಕ್ಕೂ ಹೆಚ್ಚು ವಿಗ್ರಹಗಳು. ಇವಕ್ಕೊಂದು ಗತಿ ಕಾಣಿಸಲೇ ಬೇಕು ಎಂದು ಭಾಸ್ಕರ ಭಟ್ಟ ನಿರ್ಧಾರಕ್ಕೆ ಬಂದ. ಊರವರಿಗೆಲ್ಲ ತಾನು ಮೂಲ ಈಶ್ವರ ಲಿಂಗಕ್ಕೆ